

# ನೀರಿಲ್ಲದ ಮೀನು ಮತ್ತು ಉಸಿರಿಲ್ಲದ ನಾವು...

**ಇಂದಿನ ಮನುಷ್ಯಕುಲದ ದುರಂತಕ್ಕೆ ಕಾರಣಗಳೇನು? ಅದರ ಮುಲಾಮು ಇರುವುದು ಪ್ರಕೃತಿಯಲ್ಲಿಯಾ ಅಥವಾ ಮನುಷ್ಯನ ಅಹಂಕಾರದ ಕೃತಕ ಸೃಷ್ಟಿಯಲ್ಲಿಯಾ ಎಂಬ ಪ್ರಶ್ನೆಯನ್ನು ಎತ್ತುವ ಕಿರುಚಿತ್ರವಿದು.**

■ ಗೌರಿ

ಮನುಷ್ಯ ಪ್ರಕೃತಿಯ ಕೂಸು. ಅದರ ಒಡಲಲ್ಲಿಯೇ ವಿಕಾಸಗೊಂಡವನು. ಆದರೆ ಇಂದು ತನ್ನನ್ನು ಪೋಷಿಸುವ ಒಡಲನ್ನೇ ಬಗೆದು ವಿಕೃತಿ ಮೆರೆಯುವ ಮಟ್ಟಕ್ಕೆ ಬಂದಿದ್ದಾನೆ. ಎಲ್ಲವೂ ತನ್ನ ಅಧೀನ, ತಾನು ಒಡೆಯ ಎಂಬ ಅಹಂಕಾರದಲ್ಲಿ ಮಿತಿ ಮೀರಿ ಪ್ರಕೃತಿಯನ್ನು ಶೋಷಿಸಿದ್ದಾನೆ. ಅದರ ಪರಿಣಾಮವನ್ನೂ ಅಷ್ಟೇ ಭೀಕರವಾಗಿ ಉಣ್ಣುತ್ತಿದ್ದಾನೆ. ಇಡೀ ಜಗತ್ತನ್ನೇ ಬೆಚ್ಚಿಬೀಳಿಸಿರುದ ಕೊರೊನಾ, ಮನುಷ್ಯ ಪ್ರಕೃತಿಯನ್ನು ಕೆಣಕಿದ್ದಕ್ಕೆ, ಅದರ ಒಡಲ ಬಗೆಯಲು ಹೋಗಿದ್ದಕ್ಕೆ ಸಿಕ್ಕ ಸಣ್ಣ ಪ್ರತಿಫಲ ಅಷ್ಟೆ.

ಫಿಲಿಪ್ ಜಾಲುಸ್ಕಾ ನಿರ್ದೇಶನದ 'ಇನ್ ಬಿಟ್ವೀನ್' ಎಂಬ ಕಿರುಚಿತ್ರ ಕೂಡ ಇದೇ ಸಂಗತಿಯನ್ನು ಅತ್ಯಂತ ಕಡಿಮೆ ಅವಧಿಯಲ್ಲಿ, ಅಷ್ಟೇ ಸಶಕ್ತವಾಗಿ ಹೇಳುತ್ತದೆ. ಕಾವ್ಯದಲ್ಲಿ ಸುಳಿದು ಮಿಂಚು ಹೊಳೆಯಿಸುವ ಒಂದು ಸಾಲಿನಂಥದ್ದೇ ಗುಣ ಈ ಕಿರುಚಿತ್ರಕ್ಕಿದೆ. ಇದು ಹೀಗೆ, ಅದರ ಅರ್ಥ ಇಷ್ಟೇ ಎಂದು ಹೇಳುವ ಅವಸರ ನಿರ್ದೇಶಕರಿಗಿಲ್ಲ. ಎರಡು ಇಮೇಜ್‌ಗಳನ್ನು ಮುಖಾಮುಖಿಯಾಗಿಸಿ ಅದರಿಂದ ಹೊಮ್ಮುವ ಧ್ವನಿಯ ಮೂಲಕ ವೀಕ್ಷಕರ ಮನಸಲ್ಲಿ ಚಿಂತನೆಯ ಅಲೆ ಎಬ್ಬಿಸುವುದು ಅವರ ಉದ್ದೇಶ. ಆ ಉದ್ದೇಶದಲ್ಲಿ ಈ ಕಿರುಚಿತ್ರ ಯಶಸ್ವಿಯಾಗಿದೆ. ಅಂದಹಾಗೆ ಇದು ಕೊರೊನಾ ವ್ಯಾಪಿಸಿ ಜಗತ್ತು ಸ್ತಬ್ಧವಾಗಿದ್ದ ಸಮಯದಲ್ಲಿಯೇ ರೂಪಿಸಿರುವ ಕಿರುಚಿತ್ರ.

ಒಂದು ದೊಡ್ಡ ಬಿಲ್ಡಿಂಗಿನ ಒಳಗಿನಿಂದ ನಡುವಯಸ್ಸು ಮೀರಿದ ಹೆಣ್ಣೊಬ್ಬಳು ಹೊರಗೆ ಬರುತ್ತಾಳೆ. ಅದು ಕತ್ತಲ ರಾತ್ರಿ. ಹೊರಗೆ ಬಂದು ನೀರು ಕುಡಿಯುತ್ತಾಳೆ. ನಂತರ ಮಾಸ್ಕ್ ಹಾಕಿಕೊಂಡು ತನ್ನ ಕಾರಿನ ಬಳಿ ಹೋಗುತ್ತಾಳೆ. ಇನ್ನೇನು ಬಾಗಿಲು ತೆರೆದು ಕಾರ್ ಏರಬೇಕು. ಅಷ್ಟರಲ್ಲಿ ಕಾರಿನ ಹಿಂದಿನ ಚಕ್ರದ ಸಮೀಪ ಒಂದು ದೃಶ್ಯ ನೋಡುತ್ತಾಳೆ. ದಿಗ್ಭ್ರಮೆಯಾದಂತಾಗಿ ಅದನ್ನೇ ದಿಟ್ಟಿಸುತ್ತ ಕೂಡುತ್ತಾಳೆ. ಅಲ್ಲಿ ನೆಲದ ಮೇಲೊಂದಿಷ್ಟು ನೀರು ಚೆಲ್ಲಿದೆ. ಅದರ ಮೇಲೆ ಒಂದು ಮೀನು ಬಿದ್ದಿದೆ. ಅದು ಮುಳುಗುವಷ್ಟು ನೀರು ಅಲ್ಲಿಲ್ಲ. ಹಾಗಾಗಿ ಕಿವಿರುಗಳನ್ನು ಹೊರಳಿಸಿಕೊಳ್ಳುತ್ತ ಮರಣಶಯ್ಯೆಯಲ್ಲಿ ಒದ್ದಾಡುತ್ತಿದೆ. ಅದನ್ನು ನೋಡಿದ ಹೆಣ್ಣು ಕಾರಿನೊಳಗೆ ಕೂಡುತ್ತಾಳೆ.



**ಹೆಸರು:** ಇನ್ ಬಿಟ್ವೀನ್
**ನಿರ್ದೇಶನ/ಛಾಯಾಗ್ರಹಣ:** ಫಿಲಿಫ್ ಜಾಲುಸ್ಕಾ
**ನಿರ್ಮಾಣ:** ಮೂನ್ ಫಿಲ್ಮ್ಸ್
**ನಟನೆ:** ಮ್ಯಾಗ್ದಲೆನ್ ಬೊಕ್

ಒಳಗೆ ಕೂಡುತ್ತಿದ್ದಂತೆಯೇ ಮಾಸ್ಕ್‌ನೊಳಗಿನ ಉಸಿರಾಟ ಜೋರಾಗುತ್ತದೆ. ಆ ಕ್ಷಣದಲ್ಲಿ ಅವಳ ಉಚ್ಛ್ವಾಸ ನಿಶ್ವಾಸಗಳಲ್ಲಿ ಹಿಗ್ಗಿ ಕುಗ್ಗುವ ಮಾಸ್ಕ್‌ನಲ್ಲಿ, ಮರಣಶಯ್ಯೆಯಲ್ಲಿ ಒದ್ದಾಡುತ್ತಿರುವ ಮೀನಿನ ಚಿತ್ರವೇ ಕಣ್ಮುಂದೆ ಬಂದುಬಿಡುತ್ತದೆ. ಉಸಿರಾಟದ ಹೊಯ್ದಾಟ ನಿಂತಾಗ ಅವಳೊಂದು ಕಾಡಿನ ನಡುವೆ ಬೆತ್ತಲಾಗಿ ನಡೆದಾಡುತ್ತಿರುತ್ತಾಳೆ.

ಆ ಹೆಣ್ಣು ಕಾಡಿನ ನಡುವೆ ಬೆತ್ತಲಾಗಿ ನಿಂತಿರುವ ದೃಶ್ಯಕ್ಕೇ ಚಿತ್ರ ಮುಗಿದುಬಿಡುತ್ತದೆ. ಪ್ರಕೃತಿಯ ನಡುವೆ ಸಹಜವಾಗಿ ಬದುಕಿರಬೇಕಾದ ಮನುಷ್ಯ, ತನ್ನದೇ ಕೃತಕ ಜಗತ್ತನ್ನು ಕಟ್ಟಿಕೊಳ್ಳಲು ಹೋಗಿ, ಅದರಿಂದಾದ ಅನಾಹುತಗಳ ಬಲೆಗೆ ಅವನೇ ಸಿಲುಕಿ ಒದ್ದಾಡುತ್ತಿರುವ ಸಂಕೀರ್ಣ ವಿಷಯವನ್ನು ನಿರ್ದೇಶಕರು ಮೂರೂವರೆ ನಿಮಿಷಗಳಲ್ಲಿ ಕಾವ್ಯಾತ್ಮಕವಾಗಿಯೇ ದಾಟಿಸಿಬಿಡುತ್ತಾರೆ.

ನೀರಿಲ್ಲದ ಮೀನು ಮತ್ತು ಉಸಿರಿಲ್ಲದ ಮನುಷ್ಯನ ಇಮೇಜ್‌ಗಳನ್ನು ಮುಖಾಮುಖಿ ಆಗಿಸುವುದರಲ್ಲಿಯೇ ಈ ಕಿರುಚಿತ್ರದ ಶಕ್ತಿಯಿದೆ. ಆ ಮುಖಾಮುಖಿಗೆ ಹಲವು ಸಂಗತಿಗಳನ್ನು ಹೊಳೆಯಿಸುವ ಶಕ್ತಿ ಇದೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/34cD0oK ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.